# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: (1) ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ (2) ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

ಓದಲಾಗಿದೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂ. Compt/UPLOK/BGM-3909/2014/PP, ದಿನಾಂಕ: 17.11.2018.

ಪ್ರಸ್ತಾವನೆ:

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 03.11.2018 ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಅಶೋಕ್ ಸಿದ್ದಪ್ಪ ಹಾವಿನಾಳ್, ಉಕ್ಕಲಿ ಗ್ರಾಮ ಮತ್ತು ಅಂಚೆ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ ಮತ್ತು (2) ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು 1 ಮತ್ತು 2' ಎಂದು ಕರೆಯಲ್ಪಡುತ್ತಾರೆ.) ಇವರುಗಳ ವಿರುದ್ಧ ಕುಡಿಯುವ ನೀರಿನ ಯೋಜನೆ, ವಸತಿ ಯೋಜನೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗಿಡ ನೆಡುವ ಕಾಮಗಾರಿ, ಚೆಕ್ ಡ್ಯಾಮ್ ಮತ್ತು ಕೃಷಿಹೊಂಡ ನಿರ್ಮಾಣ ಕಾಮಗಾರಿಗಳಲ್ಲಿ ಅವ್ಯವಹಾರ ಮತ್ತು ಹಣ ದುರುಪಯೋಗವಾಗಿದೆಯೆಂದು 24 ಆರೋಪಗಳನ್ನು ಮಾಡಿರುತ್ತಾರೆ. ಸದರಿಯವರ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರ ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ಆರೋಪಗಳ ಬಗ್ಗೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕರೆಯಲಾಗಿ, ಎದುರುದಾರರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆಯುತ್ತಾ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಎದುರುದಾರರು ಎಸಗಿರುವ ಅಕ್ರಮಗಳ ದೃಷ್ಟಿಯಿಂದ ಸದರಿ ಆಕ್ಷೇಪಣೆಗಳನ್ನು ಒಪ್ಪಲು ಸಾಧ್ಯವಿರುವುದಿಲ್ಲ.

ತನಿಖಾ ವರದಿಯ ಕಡತದಲ್ಲಿನ ಸಂಗತಿಗಳು ಹಾಗೂ ದಾಖಲಾತಿಗಳಿಂದ 1 ಮತ್ತು 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966 ರ ನಿಯಮ 3(i) ರಿಂದ (iii) ರನ್ವಯ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ (ನಿವೃತ್ತಿ ದಿನಾಂಕ: 31.01.2036) ಮತ್ತು ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ನಿವೃತ್ತಿ ದಿನಾಂಕ: 31.05.2026) ಇವರ ವಿರುದ್ಧ ಶಿಸ್ತು ನಡವಳಿಕೆ ಜರುಗಿಸಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡಿರುತ್ತಾರೆ.

.....2

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ ಮತ್ತು ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 534 ಗ್ರಾಪಂಕಾ 2018, ಬೆಂಗಳೂರು, ದಿನಾಂಕ: 16.01.2019</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ ಮತ್ತು ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಉಕ್ಕಲಿ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, ಪ್ರಸ್ತುತ ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/1/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
   **(ಮೇಲೆ ಓದಲಾದ ಪತ್ರದಲ್ಲಿ ಸಲ್ಲಿಸಲಾದ ಮೂಲ ದಾಖಲಾತಿಗಳನ್ನು ಪುಟ ಸಂಖ್ಯೆ 1 ರಿಂದ 449 ರವರೆಗೆ ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ)**
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತಿ, ಧಾರವಾಡ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ. (ಸದರಿ ನೌಕರರಿಗೆ ಈ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವುದು.)
7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನವಲಗುಂದ, ಧಾರವಾಡ ಜಿಲ್ಲೆ. (ಸದರಿ ನೌಕರರಿಗೆ ಈ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವುದು.)
8. ಶ್ರೀ ಪೂಜಾರಿ ಸಿ.ಬಿ., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಲವಾಡ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.
9. ಶ್ರೀ ಬಿಳೇಕುದರಿ ಡಿ.ಎಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯರನಾಳ ಗ್ರಾಮ ಪಂಚಾಯತ್, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ.
10. ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.